# ಫುಟ್‌ಬಾಲ್: ಸಿಕ್ಕಿಂ ಶೂರನ ವಿದಾಯ

■ ಪ್ರವೀಣ ಕುಲಕರ್ಣಿ

ಭಾರತೀಯ ಫುಟ್‌ಬಾಲ್ ದಿಗಂತದಲ್ಲಿ ಧ್ರುವತಾರೆಯಂತೆ ಬೆಳಗಿದ ಆಟಗಾರ ಬೈಚುಂಗ್ ಭುಟಿಯಾ. ಈ ಮಹಾನ್ ಸ್ಟ್ರೈಕರ್ 15ನೇ ನಂಬರ್ ಜರ್ಸಿಯನ್ನು ಧರಿಸಿ ಅಂಗಳಕ್ಕೆ ಧುಮುಕಿದರೆ ಚೆಂಡಿನ ಜತೆ ಜತೆಗೆ ಮಿಂಚೂ ಹರಿದಾಡುತ್ತಿದೆ ಎಂದೇ ಲೆಕ್ಕ. ಚೆಂಡನ್ನು ಗೋಲು ಪೆಟ್ಟಿಗೆಗೆ ಶೂಟ್ ಮಾಡುವ ಕೌಶಲದಿಂದಾಗಿ ಈ ಆಟಗಾರ 'ಸಿಕ್ಕಿಮೀಸ್ ಸ್ನಿಫರ್' (ಮರೆಯಲ್ಲಿ ನಿಂತು ಗುಂಡು ಹಾರಿಸಿ ಕೊಲ್ಲುವ ಸಾಮರ್ಥ್ಯವುಳ್ಳ ಸಿಕ್ಕಿಂ ವ್ಯಕ್ತಿ) ಎಂದೇ ಹೆಸರಾಗಿದ್ದಾರೆ.

ಸಿಕ್ಕಿಂನಂತಹ ಪುಟ್ಟರಾಜ್ಯದ ತಿಂಕಿಟಮ್ ಎಂಬ ಕುಗ್ರಾಮದಿಂದ ಬಂದ ಭುಟಿಯಾ, ಕೈಗೊಂಡ 'ಫುಟ್‌ಬಾಲ್ ಯಾತ್ರೆ' ಬೆರಗು ಮೂಡಿಸುತ್ತದೆ. ಕೃಷಿಕರಾದ ಭುಟಿಯಾ ದಂಪತಿ –ದೋರ್ಜಿ ದೋರ್ಮಾ ಹಾಗೂ ಸೋನಂ ತಪ್ಪನ್ – ಮಗನ ಕ್ರೀಡಾ ಪ್ರತಿಭೆ ಪ್ರೋತ್ಸಾಹಿಸುವಷ್ಟು ಸುಸ್ಥಿತಿಯಲ್ಲಿ ಇರಲಿಲ್ಲ. ಅಷ್ಟೊಂದು ಜ್ಞಾನವನ್ನಾಗಲಿ, ಹಣವನ್ನಾಗಲಿ ಅವರು ಹೊಂದಿರಲಿಲ್ಲ.

ಶಾಲಾ ದಿನಗಳಲ್ಲಿ ಬ್ಯಾಡ್ಮಿಂಟನ್, ಬ್ಯಾಸ್ಕೆಟ್‌ಬಾಲ್ ಹಾಗೂ ಅಥ್ಲೆಟಿಕ್ಸ್ ಕ್ರೀಡೆಗಳಲ್ಲಿ ಆಸಕ್ತಿ ತಾಳಿದ್ದ ಭುಟಿಯಾ, ತಮ್ಮ ಕಾಕಾ, ಕರ್ಮಾ ಸಹಾಯದಿಂದ ಪೇಕಾಂಗ್‌ನ ಸೇಂಟ್ ಕ್ಸೇವಿಯರ್ ಶಾಲೆ ಸೇರಿದ ಮೇಲೆ ಫುಟ್‌ಬಾಲ್ ಗೀಳು ಬೆಳೆಸಿಕೊಂಡರು. ಭಾರತೀಯ ಕ್ರೀಡಾ ಪ್ರಾಧಿಕಾರದ ಕ್ರೀಡಾ ಶಿಷ್ಯವೇತನ ಪಡೆದ ವರು. ಗ್ಯಾಂಗ್‌ಟಕ್‌ನಲ್ಲಿರುವ ತಶಿ ನಂಗ್ಯಾಲ್ ಅಕಾಡೆಮಿಗೆ ಸೇರ್ಪಡೆಯಾದರು.

ಸಿಕ್ಕಿಂ ರಾಜ್ಯದ ಹಲವು ಫುಟ್‌ಬಾಲ್ ಚಾಂಪಿಯನ್‌ಶಿಪ್‌ಗಳಲ್ಲಿ ಭಾಗವಹಿಸಿದ್ದ



ಈ ಹುಡುಗ, ಸುಬ್ರತೊ ಕಪ್ ಟೂರ್ನಿಯನ್ನು 'ಚಿಮ್ಮು ಹಲಗೆ' ಮಾಡಿಕೊಂಡು ಕೋಲ್ಕತ್ತಾ ಫುಟ್‌ಬಾಲ್ ಸಾಗರಕ್ಕೆ ಧುಮುಕಿದರು. ಈಸ್ಟ್ ಬೆಂಗಾಲ್ ಕ್ಲಬ್‌ಗೆ ಆಡುವ ಮೂಲಕ ವೃತ್ತಿಪರ ಕ್ರೀಡಾ ಜೀವನಕ್ಕೆ ಅಡಿ ಇಟ್ಟರು. ಕ್ಲಬ್ ತೊರೆದರೂ ಮತ್ತೆ ಬಂದು ಸೇರುತ್ತಿದ್ದ ಭುಟಿಯಾ, ನಾಲ್ಕು ಅವಧಿಗೆ ಈಸ್ಟ್ ಬೆಂಗಾಲ್ ಪರ ಆಡಿದರು. ಇಂಗ್ಲಿಷ್ ಕ್ಲಬ್ 'ಬರಿ' ತಂಡ ಸೇರುವ ಮೂಲಕ ಯುರೋಪ್‌ನಲ್ಲಿ ವೃತ್ತಿಪರ ಫುಟ್‌ಬಾಲ್ ಆಡಿದ ಮೊಟ್ಟಮೊದಲ ಭಾರತೀಯ ಆಟಗಾರ ಎಂಬ ಹಿರಿಮೆಗೂ ಒಳಗಾದರು. ಮಲೇಷ್ಯಾದ ಪೆರಿಕ್ ಎಫ್‌ಎ ಕ್ಲಬ್, ಜೆಸಿಟಿ ಮಿಲ್ಸ್, ಮೋಹನ್ ಬಾಗನ್‌ಗೆ ಆಡಿರುವ ಭುಟಿಯಾ, ಸದ್ಯ 'ಯುನೈಟೆಡ್ ಸಿಕ್ಕಿಂ' ಭಾಗವಾಗಿದ್ದಾರೆ. ನೆಹರೂ ಕಪ್, ಎಲ್‌ಜಿ ಕಪ್, ಸ್ಯಾಫ್ ಚಾಂಪಿಯನ್‌ಶಿಪ್ (ಮೂರು ಬಾರಿ) ಎಎಫ್‌ಸಿ ಚಾಲೆಂಜ್ ಕಪ್‌ಗಳನ್ನು ಭಾರತಕ್ಕೆ ಗೆದ್ದು ಕೊಟ್ಟಿರುವ ಅವರು, ದೇಶದ ಪರ ಅತ್ಯಧಿಕ ಪಂದ್ಯಗಳನ್ನು ಆಡಿದ ಆಟಗಾರ ಎಂಬ ದಾಖಲೆಯನ್ನೂ ತಮ್ಮದಾಗಿಸಿಕೊಂಡಿದ್ದಾರೆ. 2009ರಲ್ಲಿ ನಡೆದ ನೆಹರೂ ಕಪ್ ಟೂರ್ನಿಯಲ್ಲಿ ಭುಟಿಯಾಗೆ 100ನೇ ಅಂತರರಾಷ್ಟ್ರೀಯ ಪಂದ್ಯದ ಕ್ಯಾಪ್ ತೊಟ್ಟ ಗೌರವ.



'ಝಲಕ್ ದಿಖ್ಲಾ ಜಾ' ಎಂಬ ಟೀವಿ ರಿಯಾಲಿಟಿ ಶೋನಲ್ಲಿ ಕುಣಿಯುವ ಸ್ಪರ್ಧೆಯಲ್ಲಿ ಪಾಲ್ಗೊಂಡ ಭುಟಿಯಾ, ವಿವಾದವನ್ನೂ ಮೈಮೇಲೆ ಎಳೆದುಕೊಂಡಿದ್ದರು. ಆ ಕುಣಿತ ಮೊದಲ ಸ್ಥಾನದ ಜತೆಗೆ ರೂಪಾಯಿ 40 ಲಕ್ಷ ಆದಾಯ ತಂದರೂ ಅದಕ್ಕಾಗಿ ಮೋಹನ್ ಬಾಗನ್ ತಂಡದೊಂದಿಗೆ ಸಿಕ್ಕಾಪಟ್ಟೆ ರಂಪಾಟ ಮಾಡಿಕೊಳ್ಳಬೇಕಾಯಿತು. ಟಿಬೆಟನ್ನರ ಸ್ವಾತಂತ್ರ್ಯ ಹೋರಾಟವನ್ನು ಬೆಂಬಲಿಸಿದ ಭುಟಿಯಾ, ಈ ವಿಷಯವನ್ನು ಜಗತ್ತಿಗೆ ಸಾರಲು ಒಲಿಂಪಿಕ್ ಕ್ರೀಡಾ ಜ್ಯೋತಿಯನ್ನು ಹಿಡಿಯಲು ನಿರಾಕರಿಸಿದ್ದರು.

ಪದ್ಮಶ್ರೀ ಹಾಗೂ ಅರ್ಜುನ್ ಪ್ರಶಸ್ತಿ ಸೇರಿದಂತೆ ಹಲವು ಪುರಸ್ಕಾರಗಳು ಅವರನ್ನು ಹುಡುಕಿಕೊಂಡು ಬಂದಿವೆ. ಸಿಕ್ಕಿಂ ಸರ್ಕಾರ ತನ್ನ ನೆಲದ ಈ ಅದ್ಭುತ ಕ್ರೀಡಾ ಪ್ರತಿಭೆಗೆ ಗೌರವ ನೀಡುವ ಉದ್ದೇಶದಿಂದ ನಂಚಿ ಎಂಬಲ್ಲಿ ಭುಟಿಯಾ ಹೆಸರಿನಲ್ಲಿಯೇ ಕ್ರೀಡಾಂಗಣ ನಿರ್ಮಿಸಿದೆ. ಒಂದೂವರೆ ವರ್ಷದ ಹಿಂದೆ ಈ ಆಟಗಾರ ದೆಹಲಿಯಲ್ಲಿ ಭುಟಿಯಾ ಫುಟ್‌ಬಾಲ್ ಶಾಲೆಗಳನ್ನು ಆರಂಭಿಸಿದ್ದಾರೆ.

ತೋಳಿನ ಮೇಲೆ ಫುಟ್‌ಬಾಲ್ ಆಟಗಾರನ ಟ್ಯಾಟೊ ಹಾಕಿಸಿಕೊಂಡಿರುವ ಭುಟಿಯಾ, ಉಸಿರಾಡುವುದು ಸಹ ಅದೇ ಆಟವನ್ನು. ಹೆಸರು, ದುಡ್ಡು ಅವರ ಬಳಿಗೆ ಹರಿದು ಬಂದಿದೆ. ಮೊದಲು ಅಡಿದಾಸ್ ಸಂಸ್ಥೆ, ಈಗ ನೈಕ್ ಇಂಡಿಯಾ ಕಂಪೆನಿ ಅವರ ಜೊತೆ ಒಪ್ಪಂದ ಮಾಡಿಕೊಂಡಿವೆ. ನೈಕ್ ಇಂಡಿಯಾದ ಭಾರತೀಯ ರಾಯಭಾರಿಯಾಗಿಯೂ ಅವರು ನೇಮಕಗೊಂಡಿದ್ದಾರೆ.

ಗೆಳತಿ ಮಾಧುರಿ ಟಿಪ್ನಿಸ್ ಜೊತೆ ಮದುವೆ ಆಗಿರುವ ಭುಟಿಯಾಗೆ ಅವಳಿ ಮಕ್ಕಳಿದ್ದಾರೆ. ಯುನೈಟೆಡ್ ಸಿಕ್ಕಿಂ ತಂಡವನ್ನು ಹೊಂದಿರುವ ಅವರು, ಕಳೆದ ವರ್ಷ ಅದರ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಭೂಕಂಪದ ಹೊಡೆತಕ್ಕೆ ಸಿಕ್ಕಿ ಬಿದ್ದಿದ್ದರು. ಅಪಾಯದಿಂದ ಪಾರಾಗಿ ಸಂತ್ರಸ್ತರ ನೆರವಿಗೂ ಧಾವಿಸಿದ್ದರು.

ಅಂತರರಾಷ್ಟ್ರೀಯ ಫುಟ್‌ಬಾಲ್‌ಗೆ ವಿದಾಯ ಹೇಳಿರುವ ಈ ಆಟಗಾರನ ಗೌರವಾರ್ಥವಾಗಿ ಕಳೆದ ವಾರ ದೆಹಲಿಯಲ್ಲಿ ಭಾರತ ತಂಡ ಬೇಯರ್ನ್ ಮ್ಯೂನಿಕ್ ತಂಡದ ವಿರುದ್ಧ 'ಬೀಳ್ಕೊಡುಗೆ ಪಂದ್ಯ'ವನ್ನು ಆಡಿತು. ಅಂತರ ರಾಷ್ಟ್ರೀಯ ಫುಟ್‌ಬಾಲ್ ರಂಗಕ್ಕೆ ದೀವಟಿಗೆ ಹಿಡಿದು ಭಾರತ ತಂಡವನ್ನು ಮುನ್ನಡೆಸಿದ ಈ ಆಟಗಾರನನ್ನು ದೇಶದ ಕ್ರೀಡಾ ಪ್ರೇಮಿಗಳು ಎಂದಿಗೂ ಮರೆಯಲು ಸಾಧ್ಯವಿಲ್ಲ.